# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **934**

ಸದಸ್ಯರ ಹೆಸರು : **ಶ್ರೀ ಕಾಂತರಾಜ್ (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಉತ್ತರಿಸಬೇಕಾದ ದಿನಾಂಕ : 12-03-2020

ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು

***

| | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 5 ವರ್ಷಗಳಿಂದ ತುಮಕೂರು ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ಸೋಲಾರ್ ಪಾರ್ಕ್ ನಿರ್ಮಿಸಲು ಸರ್ಕಾರ ಜಮೀನನ್ನು ಭೂ ಸ್ವಾಧೀನ ಪಡಿಸಿಕೊಂಡಿದೆ; ಈ ಜಮೀನಿನಲ್ಲಿರುವ ಸರ್ಕಾರಿ ಜಮೀನು ಎಷ್ಟು; ರೈತರಿಂದ ವಶಪಡಿಸಿಕೊಂಡಿರುವ ಜಮೀನು ಎಷ್ಟು; (ವಿವರ ನೀಡುವುದು) | ರಾಜ್ಯದಲ್ಲಿ ಕರ್ನಾಟಕ ಸೌರಶಕ್ತಿ ಅಭಿವೃದ್ಧಿ ನಿಗಮವು (ಕೆ.ಎಸ್.ಪಿ.ಡಿ.ಸಿ.ಎಲ್) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ (ಕೆ.ಆರ್.ಇ.ಡಿ.ಎಲ್) ಮತ್ತು ಸೋಲಾರ್ ಎನರ್ಜಿ ಕಾರ್ಪೋರೇಷನ್ ಆಫ್ ಇಂಡಿಯಾ ರವರ ಜಂಟಿ ಸಹಯೋಗದೊಂದಿಗೆ ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನ ನಾಗಲಮಡಿಕೆ ಹೋಬಳಿಯ ಐದು ಗ್ರಾಮಗಳಾದ ವಳ್ಳೂರು, ರಾಯಚೆರ್ಲು, ಕ್ಯಾತಗಾನಚೆರ್ಲು, ಬಳಸಮುದ್ರ ಮತ್ತು ತಿರುಮಣಿ ವ್ಯಾಪ್ತಿಯಲ್ಲಿ 2050 ಮೆ.ವ್ಯಾ ಸಾಮರ್ಥ್ಯದ ಸೌರ ಪಾರ್ಕ್‌ನ್ನು ಅನುಷ್ಠಾನಗೊಳಿಸಿದೆ.<br>ಈ ಸೌರಪಾರ್ಕ್ ನಿರ್ಮಾಣಕ್ಕಾಗಿ ಕೆ.ಎಸ್.ಪಿ.ಡಿ.ಸಿ.ಎಲ್ ಸಂಸ್ಥೆಯು ಯಾವುದೇ ಜಮೀನನ್ನು ಭೂ ಸ್ವಾಧೀನಪಡಿಸಿಕೊಂಡಿಲ್ಲ ಬದಲಾಗಿ 12,854 ಎಕರೆ ಜಮೀನನ್ನು 28 ವರ್ಷಗಳ ಅವಧಿಯವರೆಗೆ ಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ. ಇದರಲ್ಲಿ ಒಟ್ಟು 87 ಎಕರೆ ಸರ್ಕಾರದ ಜಮೀನು ಆಗಿರುತ್ತದೆ. ಉಳಿದ ಜಮೀನು ಅಂದರೆ 12,767 ಎಕರೆ ರೈತರ ಒಪ್ಪಿಗೆ ಅನ್ವಯ ಗುತ್ತಿಗೆ ಪಡೆಯಲಾಗಿದೆ. |
| ಆ) | ರೈತರ ಒಪ್ಪಿಗೆ ಇಲ್ಲದೆ ಪಾವಗಡ ತಾಲ್ಲೂಕಿನ ಅತಿ ಸಣ್ಣ ಹಿಡುವಳಿ ರೈತರಿಂದ ಈ ಉದ್ದೇಶಕ್ಕಾಗಿ ಬಲವಂತದಿಂದ ಜಮೀನನ್ನು ಭೂ ಸ್ವಾಧೀನ ಪಡಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ರೀತಿ ಕ್ರಮ ತೆಗೆದುಕೊಳ್ಳಲಾಗಿದೆ; (ವಿವರ ನೀಡುವುದು) | 2050 ಮೆ.ವ್ಯಾ ಸಾಮರ್ಥ್ಯದ ಪಾವಗಡ ಸೌರಪಾರ್ಕ್ ನಿರ್ಮಾಣಕ್ಕಾಗಿ, ಕೆ.ಎಸ್.ಪಿ.ಡಿ.ಸಿ.ಎಲ್ ಸಂಸ್ಥೆಯು ಯಾವುದೇ ಜಮೀನನ್ನು ಭೂ ಸ್ವಾಧೀನಪಡಿಸಿಕೊಂಡಿಲ್ಲ. |
| ಇ) | ಭೂ ಸ್ವಾಧೀನಪಡಿಸಿಕೊಂಡ ರೈತರಿಗೆ ಯಾವ ಮಾನದಂಡ ಅನುಸರಿಸಿ ಪರಿಹಾರ ನೀಡಲಾಗುತ್ತಿದೆ; (ವಿವರ ನೀಡುವುದು) | 2050 ಮೆ.ವ್ಯಾ ಪಾವಗಡ ಸೌರಪಾರ್ಕ್ ನಿರ್ಮಾಣಕ್ಕಾಗಿ ಕೆ.ಎಸ್.ಪಿ.ಡಿ.ಸಿ.ಎಲ್ ಸಂಸ್ಥೆಯು ಯಾವುದೇ ಜಮೀನನ್ನು ಭೂ ಸ್ವಾಧೀನಪಡಿಸಿಕೊಂಡಿಲ್ಲ ಬದಲಾಗಿ 12,854 ಎಕರೆ ಜಮೀನನ್ನು 28 ವರ್ಷಗಳ ಅವಧಿಯವರೆಗೆ ಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ. ರೈತರಿಗೆ 2015-16ನೇ ವರ್ಷಕ್ಕೆ ಪ್ರತಿ ಎಕರೆಗೆ ಸರ್ಕಾರ ನಿಗದಿಪಡಿಸಿದ ಗುತ್ತಿಗೆ ದರವಾದ ರೂ.21,000/- ಹಣವನ್ನು ಪಾವತಿ ಮಾಡಲಾಗಿದೆ. ಇದು ಪ್ರತಿ 2 ವರ್ಷಕ್ಕೆ ಮೂಲ ದರದಲ್ಲಿ ಶೇ. 5% ಏರಿಕೆ ಮಾಡಲಾಗುವುದು. ಇದರಂತೆ, 2019-20ನೇ ವರ್ಷಕ್ಕೆ ಪ್ರತಿ ಎಕರೆಗೆ ರೂ.23,100/- ಗುತ್ತಿಗೆ ಹಣವನ್ನು ರೈತರಿಗೆ ನೀಡಲಾಗಿದೆ. |

...2

| | | |
|---|---|---|
| ಈ) | ಮಾರುಕಟ್ಟೆ ದರಕ್ಕಿಂತ ಕಡಿಮೆ ದರ ನೀಡಿ ರೈತರ ಜಮೀನನ್ನು ವಶಕ್ಕೆ ಪಡೆದಿರುವುದರಿಂದ ರೈತರಿಗೆ ಅನ್ಯಾಯವಾಗಿರುವುದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು; (ವಿವರ ನೀಡುವುದು) | ಪಾವಗಡ ಸೌರ ಪಾರ್ಕ್‌ಗೆ ಬೇಕಾಗಿರುವ ಜಮೀನನ್ನು ರೈತರು ಭೂ ಮಾಲೀಕತ್ವವನ್ನು ತಮ್ಮಲ್ಲೇ ಉಳಿಸಿಕೊಂಡು, ಸ್ವ–ಇಚ್ಛೆಯಿಂದ ಗುತ್ತಿಗೆ ಆಧಾರದ ಮೇಲೆ ನೀಡಿದ್ದು, ಈ ಪ್ರಕ್ರಿಯೆಯು ದೇಶದಲ್ಲಿಯೇ ಪ್ರಥಮ ಬಾರಿಗೆ ಭೂಸ್ವಾಧೀನ ಪ್ರಕ್ರಿಯೆಯಿಂದಾಗುವ ದುಷ್ಪರಿಣಾಮಗಳನ್ನು ತಪ್ಪಿಸಿದಂತಾಗಿದೆ. |

**ಸಂಖ್ಯೆ:** ಎನರ್ಜಿ 57 ಇಬಿಎಸ್ 2020

ಬಿ.ಎಸ್. ಯಡಿಯೂರಪ್ಪ
(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ